# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ–1474/2015/ಡಿಆರ್‌ಇ–1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 21/3/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ಪಿ.ಶಿವಣ್ಣ, ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ, ಮತ್ತು (2) ಶ್ರೀ..ಎಸ್.ಲಿಂಗರಾಜು, ಆಹಾರ ನಿರೀಕ್ಷಕರು, ವಿ.ದೇಮಯ್ಯ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಡಾ:ರಾಜಶ್ರೀ, ಹಿರಿಯ ಕಾರ್ಯನಿರ್ವಾಹಕ ಕಾರ್ಯಕಾರಿಣಿ, ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್ ಲಿ., 2ನೇ ಕ್ರಾಸ್, ಶ್ರೀನಿವಾಸ ಕಾಲೋನಿ, ಬೆಂಗಳೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು (1) ಆಹಾರ ನಿರೀಕ್ಷಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ ಜಿಲ್ಲೆ, (2) ಶ್ರೀ.ಪಿ.ಶಿವಣ್ಣ, ಉಪ ನಿರ್ದೇಶಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ, ಮತ್ತು (3) ಶ್ರೀ..ಎಸ್.ಲಿಂಗರಾಜು, ಆಹಾರ ನಿರೀಕ್ಷಕರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ಈ ಪ್ರಕರಣದಲ್ಲಿ ಸಲ್ಮಾ ಮೊಹಮದಿ ಬಿನ್ ಮೊಹಮ್ಮದ್ ಹುಜೀರ್ ಎನ್ನುವವರು ದಿ.2/2/15 ರಂದು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆಯನ್ನು ಪಡೆದಿದ್ದು, ಚಿಕಿತ್ಸೆಯ ಸಮಯದಲ್ಲಿ ಬಿ.ಪಿ.ಎಲ್.ಪಡಿತರ ಚೀಟಿಯನ್ನು ಹಾಜರು ಪಡಿಸಿ ಆರೋಗ್ಯ ಮಿತ್ರ ಯೋಜನೆಯಡಿಯಲ್ಲಿ ಚಿಕಿತ್ಸೆಗೆ ಆದ ವೆಚ್ಚವನ್ನು ಪಡೆಯಲು ಕೋರಿರುತ್ತಾರೆ. ಅವರು ಹಾಜರು ಪಡಿಸಿರುವ ಪಡಿತರ ಚೀಟಿಯ ಬಗ್ಗೆ ಅನುಮಾನಗೊಂಡು ವಿಚಾರಿಸಲಾಗಿ ಅವರಿಗೆ ಮನೆ ಮತ್ತು ವಾಹನಗಳಿರುವುದು ಕಂಡುಬಂತು. ಸದರಿಯವರು ಬಿ.ಪಿ.ಎಲ್. ಪಡಿತರ ಚೀಟಿಯನ್ನು ಪಡೆಯಲು ಅರ್ಹರಲ್ಲ. ಈ ಬಗ್ಗೆ ವಿಚಾರಣೆ ನಡೆಸಬೇಕೆಂದು ಕೋರಿ ದೂರನ್ನು ಸಲ್ಲಿಸಿರುತ್ತಾರೆ.

3 ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ತಹಶೀಲ್ದಾರ್, ಚಿತ್ರದುರ್ಗ ತಾಲ್ಲೂಕು, ಇವರಿಗೆ ಆದೇಶಿಸಲಾಗಿತ್ತು. ತಹಶೀಲ್ದಾರ್‌ರವರು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರಿನಲ್ಲಿ ತಿಳಿಸಿರುವಂತಹ ಪಡಿತರ ಚೀಟಿಯ ಬಗ್ಗೆ ಪರಿಶೀಲಿಸಲಾಗಿ

ಚಿತ್ರದುರ್ಗ ತಾಲ್ಲೂಕಿನ ಗ್ರಾಮೀಣ ಪ್ರದೇಶದ ಜನರಿಗೆ ಪಡಿತರ ಚೀಟಿ ನೀಡುವ ಜವಾಬ್ದಾರಿಯು ತಹಶೀಲ್ದಾರ್‌ರವರಿಗೆ ಸಂಬಂಧಿಸಿದ್ದು, ನಗರ ಪ್ರದೇಶದ ಜನರಿಗೆ ಸಹಾಯಕ ನಿರ್ದೇಶಕರು, ಉಪ ನಿರ್ದೇಶಕರ ಕಚೇರಿ, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ ಇವರಿಗೆ ಸಂಬಂಧಿಸಿರುತ್ತದೆಯೆಂದು ತಿಳಿಸಿರುತ್ತಾರೆ.

4. ತಹಶೀಲ್ದಾರ್‌ರವರು ನೀಡಿರುವ ಅಂತರ್ಜಾಲದಿಂದ ಪಡೆದು ಹಾಜರು ಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿದಾಗ, ಸಲ್ಮಾ ಮಹಮದೀ ಇವರ ತಂದೆ ಮೊಹಮ್ಮದ್ ಮುಜೀರ್‌ರವರಿಗೆ ಬಿ.ಪಿ.ಎಲ್ ಪಡಿತರ ಚೀಟಿಯನ್ನು ನೀಡಲು ದಿ.10/10/2012 ರಂದು ಎಸ್.ಲಿಂಗರಾಜ್ ಎನ್ನುವವರು ಅನುಮೋದನೆ ಮಾಡಿದ್ದು, ಅವರು ಆಹಾರ ನಿರೀಕ್ಷಕರಾಗಿರುತ್ತಾರೆಂದು ತಹಶೀಲ್ದಾರ್‌ರವರು ಹೇಳಿರುತ್ತಾರೆ. ನಂತರದಲ್ಲಿ ಶಿವಣ್ಣ ಪಿ ಎನ್ನುವವರು ದಿ.2/5/2015 ರಲ್ಲಿ ಬಿ.ಪಿ.ಎಲ್. ಪಡಿತರ ಚೀಟಿ ನೀಡಲು ಅನುಮೋದಿಸಿದ್ದು, ಸದರಿಯವರು ಉಪ ನಿರ್ದೇಶಕರಾಗಿರುತ್ತಾರೆಂದು ತಿಳಿಸಿರುತ್ತಾರೆ. ಆದ್ದರಿಂದ, ಈ ಪ್ರಕರಣದಲ್ಲಿ ಶಿವಣ್ಣ ಪಿ, ಉಪ ನಿರ್ದೇಶಕರು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮತ್ತು ಎಸ್.ಲಿಂಗರಾಜ್, ಆಹಾರ ನಿರೀಕ್ಷಕರು ಇವರುಗಳನ್ನು ಪಕ್ಷಗಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲಾಗಿರುತ್ತದೆ.

5. 2ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ತನ್ನ ಆಕ್ಷೇಪಣೆಯಲ್ಲಿ ದೂರುದಾರರು ಅವರ ವಿರುದ್ಧ ಯಾವುದೇ ಆಪಾದನೆಯನ್ನು ಮಾಡಿರುವುದಿಲ್ಲ. ಸದರಿಯವರು ದಿ.3/4/13 ರಿಂದ 17/8/16 ರವರೆಗೆ ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಚಿತ್ರದುರ್ಗ ಆಗಿ ಕಾರ್ಯ ನಿರ್ವಹಿಸಿರುತ್ತಾರೆ. ಕರ್ನಾಟಕ ಸರ್ಕಾರ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಮಹಕರ ವ್ಯವಹಾರಗಳ ಇಲಾಖೆಯಿಂದ ನೀಡಲಾದ ಆಧ್ಯತಾ ಕುಟುಂಬ ಸೀಮೆ ಎಣ್ಣೆಗೆ ಪಡಿತರ ಚೀಟಿ ಸಂ:ಸಿಟಿಡಿ 100115837 ಇದನ್ನು ಪರಿಶೀಲಿಸಿದಾಗ, ಸದರಿ ಪಡಿತರ ಚೀಟಿಯನ್ನು ದಿ.10/10/12 ರಂದು ವಿತರಿಸಲಾಗಿದೆ. ಮೊಹಮ್ಮದ್ ಮುಜೀರ್ ಇವರು ಯಜಮಾನರಾಗಿದ್ದು, ಆ ರೇಷನ್ ಕಾರ್ಡ್‌ನಲ್ಲಿರುವ ಸಲ್ಮಾ ಮಹಮದಿ ಇವರು ಮಹಮ್ಮದ್ ಮುಜೀರ್‌ರವರ ಮಗಳಾಗಿರುತ್ತಾರೆ. ಸದರಿ ಚೀಟಿಯನ್ನು ಅವರು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವ ಪೂರ್ವದಲ್ಲಿಯೇ ವಿತರಿಸಲಾಗಿದ್ದು, ದಿ.10/10/12 ರಂದು ಕರ್ತವ್ಯದಲ್ಲಿದ್ದ ಆಹಾರ ನಿರೀಕ್ಷಕರು, ಚಿತ್ರದುರ್ಗ ಟೌನ್, ಚಿತ್ರದುರ್ಗ ಇವರು ವಿತರಿಸಿರುತ್ತಾರೆ. ಅದನ್ನು ಉಪಯೋಗಿಸಿಕೊಂಡು ಸರ್ಕಾರದಿಂದ ನೀಡುವ ಸೌಲಭ್ಯವನ್ನು ವಂಚಿಸಿ ಉಪಯೋಗಿಸಿಕೊಂಡಿರುವ ಸಂಬಂಧ ಅವರ ಯಾವುದೇ ಪಾತ್ರವಿಲ್ಲವೆಂದು ಹೇಳಿರುತ್ತಾರೆ.

6. 3ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೆಪಣೆಯಲ್ಲಿ ಸರ್ಕಾರ 2011 ರ ಸಾಲಿನಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಫಲಾನುಭವಿಗಳಿಗೆ ಹೊಸ ಪಡಿತರ ಚೀಟಿ ನೀಡುವ ಸಮಯದಲ್ಲಿ ಪಡಿತರ ಚೀಟಿ ಫಲಾನುಭವಿಯಿಂದ ಪ್ರಮಾಣ ಪತ್ರ ಪಡೆದು ಪಡಿತರ ಚೀಟಿಯನ್ನು ಯಾವುದೇ ತನಿಖೆ ಇಲ್ಲದೆ ಕಾಮೆಟ್ ಸಂಸ್ಥೆಯ ಮುಖಾಂತರ ಪಡಿತರ ಚೀಟಿಯನ್ನು ವಿತರಣೆ

ಮಾಡಿಸಿರುತ್ತಾರೆ. ಆ ಸಮಯದಲ್ಲಿ ಫಲಾನುಭವಿಯು ಪ್ರಮಾಣ ಪತ್ರ ಸಲ್ಲಿಸಿ ತಾತ್ಕಾಲಿಕ ಪಡಿತರ ಚೀಟಿಯನ್ನು ಕಾಮೆಟ್ ಸಂಸ್ಥೆಯಿಂದ ಪಡೆದಿರುತ್ತಾರೆ. ಆ ಸಮಯದಲ್ಲಿ ಅರ್ಜಿಗಳ ವಾಸ್ತವಾಂಶದ ತನಿಖೆ ಮಾಡಿ ಸರ್ಕಾರ ಅವಕಾಶ ನೀಡಿರುವುದಿಲ್ಲ. ತದನಂತರ ತಾತ್ಕಾಲಿಕ ಪಡಿತರ ಚೀಟಿಗಳನ್ನು ಖಾಯಂ ಪಡಿತರ ಚೀಟಿಗಳನ್ನಾಗಿ ಪರಿವರ್ತಿಸಲು ಸರ್ಕಾರ ಆದೇಶ ನೀಡಿರುತ್ತದೆ. ಆ ಸಮಯದಲ್ಲಿ ಇವರು ತಾತ್ಕಾಲಿಕ ಪಡಿತರ ಚೀಟಿಯಿಂದ ಖಾಯಂ ಪಡಿತರ ಚೀಟಿಯನ್ನು ಫಲಾನುಭವಿ ಪಡೆದಿರುತ್ತಾರೆ. ತಾತ್ಕಾಲಿಕ ಪಡಿತರ ಚೀಟಿಯನ್ನು ನೀಡಬೇಕಾದ ಸಮಯದಲ್ಲಿ ಆಯಾ ತಾಲ್ಲೂಕಿನ ಅಥವಾ ನಗರದ ಆಹಾರ ನಿರೀಕ್ಷಕರಿಂದ ಕಾಮೆಟ್ ಸಂಸ್ಥೆಯವರು ಲಾಗಿನ್ ಪಡೆದು ಕಾಮೆಟ್ ಸಂಸ್ಥೆಯವರೇ ಪಡಿತರ ಚೀಟಿಗಳನ್ನು ಫಲಾನುಭವಿಗಳಿಗೆ ವಿತರಿಸಿರುತ್ತಾರೆ. ತದನಂತರ ಪಡಿತರ ಚೀಟಿಗಳ ಪರಿಶೀಲನಾ ಸಮಯದಲ್ಲಿ ಸದರಿ ಪಡಿತರ ಚೀಟಿಯನ್ನು ರದ್ದುಪಡಿಸಲಾಗಿರುತ್ತದೆ. ಅವರು ಸುಮಾರು 10 ವರ್ಷಗಳಿಂದ ಆಹಾರ ನಿರೀಕ್ಷಕರ ಹುದ್ದೆಯಲ್ಲಿದ್ದು ಸರ್ಕಾರದ ಜಾಬ್‌ಕಾರ್ಡ್‌ನಂತೆ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಅವರ ಕರ್ತವ್ಯದ ಅವಧಿಯಲ್ಲಿ ಯಾವುದೇ ರೀತಿಯ ಲೋಪದೋಷಗಳನ್ನು ಎಸಗಿರುವುದಿಲ್ಲವೆಂದು ಹೇಳಿರುತ್ತಾರೆ.

7. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿತ್ರದುರ್ಗ ಇವರು ಹಾಜರಾಗಿ ವರದಿ ಹಾಗೂ ದಾಖಲಾತಿಗಳನ್ನು ಸಲ್ಲಿಸಿದ್ದು, ಉಪ ನಿರ್ದೇಶಕರು ತಮ್ಮ ವರದಿಯಲ್ಲಿ ಪಡಿತರ ಚೀಟಿಯ ಬಗ್ಗೆ ಆನ್‌ಲೈನ್ ದತ್ತಾಂಶದಲ್ಲಿ ಪರಿಶೀಲಿಸಲಾಗಿದ್ದು, ಸದರಿ ಪಡಿತರ ಚೀಟಿಯು ಪ್ರಸ್ತುತ ರದ್ದಾಗಿರುತ್ತದೆ. ಸದರಿ ಪಡಿತರ ಚೀಟಿಯು ಮೊಹಮ್ಮದ ಮುಜೀರ್ ಎನ್ನುವವರ ಹೆಸರಿನಲ್ಲಿದ್ದು, ಆದ್ಯತಾ ಪಡಿತರ ಚೀಟಿಯಾಗಿರುತ್ತದೆ. ಸದರಿ ಪಡಿತರ ಚೀಟಿ ಎಸ್.ಲಿಂಗರಾಜು, ಆಹಾರ ನಿರೀಕ್ಷಕರು ಇವರ ಲಾಗಿನ್‌ನಲ್ಲಿ ದಿ.10/10/12 ರಲ್ಲಿ ವಿತರಣೆಯಾಗಿದ್ದು, ನಂತರ ಶ್ರೀ.ಶಿವಣ್ಣ ಉಪ ನಿರ್ದೇಶಕರು ಇವರ ಲಾಗಿನ್‌ನಲ್ಲಿ ದಿ.13/3/2015 ರಲ್ಲಿ ರದ್ದಾಗಿರುತ್ತದೆ. ನಂತರ ಅದೇ ಉಪ ನಿರ್ದೇಶಕರ ಲಾಗಿನ್‌ನಲ್ಲಿ ದಿ.2/5/15 ರಲ್ಲಿ ಸ್ವೀಕೃತಗೊಂಡಿರುತ್ತದೆ. ನಂತರ ದಿ.3/7/15 ರಲ್ಲಿ ಶ್ರೀಮತಿ.ಶಬಾನಾ ಪರ್ವಿನ್, ಆಹಾರ ನಿರೀಕ್ಷಕರ ಲಾಗಿನ್‌ನಲ್ಲಿ ರದ್ದಾಗಿ ಆದ್ಯತೇತರ ಪಡಿತರ ಚೀಟಿಯಾಗಿರುತ್ತದೆ ಎಂದು ಹೇಳಿರುತ್ತಾರೆ.

8. ಉಪ ನಿರ್ದೇಶಕರು ವರದಿಯ ಜೊತೆ ಹಾಜರು ಪಡಿಸಿರುವ ದಾಖಲಾಲೆಯನ್ನು ಪರಿಶೀಲಿಸಿದಾಗ, ಸಲ್ಮಾ ಮಹಮದೀ ಇವರ ತಂದೆ ಮೊಹಮ್ಮದ್ ಮುಜೀರ್‌ರವರಿಗೆ ಬಿ.ಪಿ.ಎಲ್ ಪಡಿತರ ಚೀಟಿಯನ್ನು ನೀಡಲು ದಿ.10/10/2012 ರಂದು ಎಸ್.ಲಿಂಗರಾಜ್ ಎನ್ನುವವರು ಅನುಮೋದನೆ ಮಾಡಿದ್ದು, ನಂತರ ಶ್ರೀ.ಶಿವಣ್ಣ ಉಪ ನಿರ್ದೇಶಕರು ದಿ.13/3/2015 ರಲ್ಲಿ ರದ್ದು ಮಾಡಿರುತ್ತಾರೆ. ನಂತರ ಉಪ ನಿರ್ದೇಶಕರಾದ ಶ್ರೀ.ಶಿವಣ್ಣ ಪಿ ಇವರು ದಿ.2/5/2015 ರಲ್ಲಿ ಸದರಿ ಬಿ.ಪಿ.ಎಲ್. ಪಡಿತರ ಚೀಟಿಯನ್ನು ವಿತರಣೆ ಮಾಡಿರುವುದು ಕಂಡುಬರುತ್ತದೆ.

9. ಉಪ ನಿರ್ದೇಶಕರ ವರದಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ, ಮಹಮ್ಮದ್ ಮುಜೀರ್ ಎನ್ನುವವರು ಬಿಪಿಎಲ್ ಪಡಿತರ ಚೀಟಿಯನ್ನು ಪಡೆಯಲು ಅರ್ಹರಿಲ್ಲದೇ ಇದ್ದರೂ ಸಹ ಲಿಂಗರಾಜು, ಆಹಾರ ನಿರೀಕ್ಷಕರು ಹಾಗೂ ಶಿವಣ್ಣ ಉಪ ನಿರ್ದೇಶಕರು, ಆಹಾರ ಮತ್ತು

ನಾಗರೀಕ ಸರಬರಾಜು ಇಲಾಖೆ ಇವರು ಪಡಿತರ ಚೀಟಿ ವಿತರಿಸಿ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ಆದ್ದರಿಂದ 2 ಮತ್ತು 3ನೇ ಎದುರುದಾರರು ಶಿಸ್ತು ಕ್ರಮಕ್ಕೆ ಭಾದ್ಯಸ್ಥರಾಗಿರುತ್ತಾರೆ.

10. 2 ಮತ್ತು 3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1)(ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14–ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11 ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್.ಆನಂದ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**

21/5